# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಮುನಿರಾಜುಗೌಡ ಪಿ.ಎಂ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1142 |
| ಉತ್ತರಿಸಬೇಕಾದ ದಿನಾಂಕ | : | 28.12.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ವರ್ಷದಿಂದ ಚರ್ಮಗಂಟು ರೋಗಕ್ಕೆ ಬಲಿಯಾದ ಜಾನುವಾರುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | 2022-23ನೇ ಸಾಲಿನಲ್ಲಿ ದಿನಾಂಕ:23.12.2022 ರಲ್ಲಿದ್ದಂತೆ 22538 ಜಾನುವಾರುಗಳ ಮರಣ ಹೊಂದಿರುತ್ತವೆ. ಜಿಲ್ಲಾವಾರು ಮಾಹಿತಿಯನ್ನು **<u>ಅನುಬಂಧದಲ್ಲಿ</u> ನೀಡಿದೆ.** |
| ಆ | ಚರ್ಮಗಂಟು ರೋಗಕ್ಕೆ ಜಾನುವಾರುಗಳು ಮೃತವಾದಲ್ಲಿ ರೈತರಿಗೆ ನೀಡುವ ಪರಿಹಾರವೆಷ್ಟು; ಇಲ್ಲಿಯವರೆಗೆ ಎಷ್ಟು ರೈತರಿಗೆ ಪರಿಹಾರ ನೀಡಲಾಗಿದೆ; ಬಾಕಿ ಉಳಿದ ರೈತರಿಗೆ ಯಾವ ಕಾಲಮಿತಿಯಲ್ಲಿ ಪರಿಹಾರ ನೀಡಲಾಗುವುದು; | ಚರ್ಮಗಂಟು ರೋಗದಿಂದ ಮರಣ ಹೊಂದಿರುವ ಆಕಳು ಮತ್ತು ಎತ್ತುಗಳಿಗೆ ಸರ್ಕಾರದಿಂದ ಕರುಗಳಿಗೆ ರಾಜ್ಯಾದ್ಯಂತ ಮೃತಪಟ್ಟ ಜಾನುವಾರುಗಳ ಮಾಲೀಕರಿಗೆ ಸರ್ಕಾರವು ಪ್ರತಿ ಕರುವಿಗೆ ರೂ.5,000/- ಪ್ರತಿ ಹಸುವಿಗೆ ರೂ.20,000/- ಹಾಗೂ ಪ್ರತಿ ಎತ್ತಿಗೆ ರೂ.30,000/- ದಂತೆ ಪರಿಹಾರವನ್ನು ಘೋಷಿಸಿರುತ್ತದೆ. ಈಗಾಗಲೇ ಒಟ್ಟು ರೂ.7.00 ಕೋಟಿ ಪರಿಹಾರ ಧನವನ್ನು 3079 ಜಾನುವಾರು ಮಾಲೀಕರಿಗೆ ವಿತರಿಸಲಾಗಿದೆ ಹಾಗೂ ದಿನಾಂಕ:6-12-2022 ರಂದು ಹೆಚ್ಚುವರಿ ಪರಿಹಾರ ಧನ ರೂ.30.00 ಕೋಟಿ ಬಿಡುಗಡೆಗೊಳಿಸಿದ್ದು, ಫಲಾನುಭವಿಗಳಿಗೆ ವಿತರಣಾ ಕಾರ್ಯ ಪ್ರಗತಿಯಲ್ಲಿದೆ. |
| ಇ | ಜಾನುವಾರುಗಳ ರೋಗ ಪತ್ತೆಹಚ್ಚಲು ಮಾದರಿಗಳ ಪರೀಕ್ಷೆಗಾಗಿ ರಾಜ್ಯದಲ್ಲಿ ಇರುವ ಪ್ರಯೋಗಾಲಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಜಾನುವಾರುಗಳ ರೋಗ ಪತ್ತೆ ಹಚ್ಚಲು ಮಾದರಿಗಳ ಪರೀಕ್ಷೆಗಾಗಿ ಕರ್ನಾಟಕ ರಾಜ್ಯದಲ್ಲಿ ಹದಿಮೂರು ಪ್ರಯೋಗಾಲಯಗಳು ಈ ಕೆಳಗಿನ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿವೆ :<br><br>1. ಬಾಗಲಕೋಟೆ<br>2. ಬೆಳಗಾವಿ<br>3. ಬಳ್ಳಾರಿ<br>4. ಬೀದರ್<br>5. ದಾವಣಗೆರೆ<br>6. ಕಲಬುರ್ಗಿ<br>7. ಕೋಲಾರ<br>8. ಮಂಗಳೂರು<br>9. ಮೈಸೂರು<br>10.ಶಿವಮೊಗ್ಗ<br>11.ಶಿರಾ<br>12. ಶಿರಸಿ ಮತ್ತು ವನ್ಯ ಜೀವಿಗಳ ರೋಗ ತನಿಖಾ ಪ್ರಯೋಗಾಲಯ, ಬನ್ನೇರುಘಟ್ಟ |

| | | |
|---|---|---|
| | | ಮುಂದುವರೆದು ಐದು ಜಿಲ್ಲಾ ಪ್ರಯೋಗಾಲಯಗಳು ರಾಯಚೂರು, ಕೊಪ್ಪಳ, ವಿಜಯಪುರ, ಗದಗ ಮತ್ತು ಧಾರವಾಡ ಜಿಲ್ಲಾ ಪ್ರಯೋಗಾಲಯಗಳು ಸರ್ಕಾರದಿಂದ ಮಂಜೂರಾಗಿದ್ದು ಸ್ಥಾಪನಾ ಕಾರ್ಯವು ಪ್ರಗತಿಯಲ್ಲಿದೆ. |
| ಈ | ಜಾನುವಾರುಗಳ ರೋಗ ಮತ್ತು ಇತರೆ ಮಾಹಿತಿ ಪಡೆಯಲು ಜಿಲ್ಲಾ ಕೇಂದ್ರದಲ್ಲಿ ಪ್ರಯೋಗಾಲಯ ಲಭ್ಯವಿಲ್ಲದೆ ಬೇರೆ ಜಿಲ್ಲೆಗಳಿಗೆ ಮಾದರಿ ಕಳುಹಿಸಿ ವರದಿ ಪಡೆಯಲು ಸಮಯ ವ್ಯರ್ಥವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುತ್ತದೆ. ಈಗಾಗಲೇ ರಾಜ್ಯದ 12 ಜಿಲ್ಲೆಗಳಲ್ಲಿ ಪ್ರಯೋಗಾಲವು ಕಾರ್ಯನಿರ್ವಹಿಸುತ್ತಿದ್ದು, 5 ಜಿಲ್ಲೆಗಳಲ್ಲಿ ಪ್ರಯೋಗಾಲಯದ ಸ್ಥಾಪನಾ ಕಾರ್ಯವು ಪ್ರಗತಿಯಲ್ಲಿದೆ. ಉಳಿದ 13 ಜಿಲ್ಲೆಗಳಲ್ಲಿ ಆರ್.ಐ.ಡಿ.ಎಫ್ ಟ್ರಾಂಚ್ 28 ರಡಿಯಲ್ಲಿ ಪ್ರಯೋಗಾಲಯಗಳನ್ನು ಸ್ಥಾಪಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |
| ಉ | ರೈತರಿಗೆ ಅನುಕೂಲ ಮಾಡುವ ಸಲುವಾಗಿ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಪ್ರಯೋಗಾಲಯ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು? | ರೈತರಿಗೆ ಅನುಕೂಲ ಮಾಡುವ ಸಲುವಾಗಿ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಪ್ರಯೋಗಾಲಯ ಸ್ಥಾಪಿಸುವ ಉದ್ದೇಶದಿಂದ ಆರ್.ಐ. ಡಿ. ಎಫ್ ಟ್ರಾಂಚ್-28 ರಡಿಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಹದಿಮೂರು ಜಿಲ್ಲಾ ಪ್ರಯೋಗಾಲಯಗಳನ್ನು ಈ ಕೆಳಕಂಡ ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.<br>1. ಹಾವೇರಿ,<br>2. ಚಾಮರಾಜ ನಗರ,<br>3. ಚಿಕ್ಕಬಳ್ಳಾಪುರ,<br>4. ಚಿಕ್ಕಮಗಳೂರು,<br>5. ಚಿತ್ರದುರ್ಗ,<br>6. ಹಾಸನ,<br>7. ಕೊಡಗು,<br>8. ಮಂಡ್ಯ,<br>9. ರಾಮನಗರ,<br>10. ಉಡುಪಿ,<br>11. ವಿಜಯ ನಗರ,<br>12. ಯಾದಗಿರಿ, ಮತ್ತು<br>13. ಬೆಂಗಳೂರು ಗ್ರಾಮಾಂತರ |

**ಇ- ಪಸಂಮೀ 306 ಸಲೆವಿ 2022**

**(ಪ್ರಭು ಬಿ. ಚವ್ಹಾಣ್)**
**ಪಶುಸಂಗೋಪನೆ ಸಚಿವರು**

# ಅನುಬಂಧ

## ದಿನಾಂಕ: 23-12-2022 ರಲ್ಲಿದ್ದಂತೆ ಚರ್ಮಗಂಟು ರೋಗದ (LSD) ರೋಗದಿಂದ ಮರಣಹೊಂದಿದ ಜಾನುವಾರುಗಳ ಜಿಲ್ಲಾವಾರು ವಿವರ

| ಕ್ರ. ಸಂ | ವಿಭಾಗ | ಜಿಲ್ಲೆ | ಮರಣ ಹೊಂದಿದ ಜಾನುವಾರುಗಳು ಸಂಖ್ಯೆ |
|---|---|---|---|
| 1 | ಬೆಂಗಳೂರು | ಬೆಂಗಳೂರು ನಗರ | 105 |
| 2 | | ಬೆಂಗಳೂರು ಗ್ರಾಮಾಂತರ | 181 |
| 3 | | ಚಿತ್ರದುರ್ಗ | 1298 |
| 4 | | ಚಿಕ್ಕಬಳ್ಳಾಪುರ | 366 |
| 5 | | ದಾವಣಗೆರೆ | 1257 |
| 6 | | ಕೋಲಾರ | 232 |
| 7 | | ರಾಮನಗರ | 318 |
| 8 | | ಶಿವಮೊಗ್ಗ | 696 |
| 9 | | ತುಮಕೂರು | 802 |
| 10 | ಮೈಸೂರು | ಚಾಮರಾಜನಗರ | 243 |
| 11 | | ಚಿಕ್ಕಮಗಳೂರು | 359 |
| 12 | | ದಕ್ಷಿಣ ಕನ್ನಡ | 45 |
| 13 | | ಹಾಸನ | 159 |
| 14 | | ಕೊಡಗು | 0 |
| 15 | | ಮೈಸೂರು | 177 |
| 16 | | ಮಂಡ್ಯ | 219 |
| 17 | | ಉಡುಪಿ | 4 |
| 18 | ಬೆಳಗಾವಿ | ಬೆಳಗಾವಿ | 5681 |
| 19 | | ಬಾಗಲಕೋಟೆ | 1167 |
| 20 | | ಧಾರವಾಡ | 672 |
| 21 | | ಗದಗ | 1037 |
| 22 | | ಹಾವೇರಿ | 2665 |
| 23 | | ಉತ್ತರ ಕನ್ನಡ | 185 |
| 24 | | ವಿಜಯಪುರ | 203 |
| 25 | ಕಲಬುರ್ಗಿ | ಬಳ್ಳಾರಿ | 2920 |
| 26 | | ಬೀದರ | 94 |
| 27 | | ಕಲ್ಬುರ್ಗಿ | 232 |
| 28 | | ಕೊಪ್ಪಳ | 747 |
| 29 | | ರಾಯಚೂರು | 336 |
| 30 | | ಯಾದಗಿರಿ | 138 |
| ಒಟ್ಟು | | | 22538 |